ಬೇರುಗಳಿಂದ ಹೊರಹೊಮ್ಮಿದ ಪಸೆಯದ್ದಿರಬಹುದೆ? ನನ್ನ ಮಾತುಗಳಿಂದ ಅವನ ಮುಖದಲ್ಲಿ ಸಮಾಧಾನದ ಗೆರೆಗಳು ಮೂಡಿದಂತೆ ಬಾಯಿ ತೆರೆದಿದ್ದ: ''ಮಣಿಕರ್ಣಿಕ ಘಾಟ್ ಹತ್ತಿರ ಗಂಗೆಯ ಮಧ್ಯೆ ಭಾಗದಲ್ಲಿ ಪಿಂಡ ಬಿಟ್ಟ ನಂತರ ಬೋಟಿನವನು ನನ್ನನ್ನು ಘಾಟ್ ತಲುಪಿಸಿ ಹೋಗಿದ್ದ. ಓಹ್ ನಿಜಕ್ಕೂ ಅಂಥ ದೃಶ್ಯಗಳನ್ನು ನೋಡುತ್ತಿದ್ದದ್ದು ಅದೇ ಮೊದಲು. ಘಾಟ್‌ನಲ್ಲಿ ಐದೈದು ನಿಮಿಷಕ್ಕೊಂದು ಶೃಂಗಾರಗೊಂಡ ಹೆಣ ಬರುತ್ತಿತ್ತು. ಹೆಣಗಳನ್ನು ಗಂಗೆಯಲ್ಲಿ ಮೂರು ಸಾರಿ ಮುಳುಗಿಸಿ ಘಾಟಿನ ಚಿತೆಗಳ ಮೇಲೆ ಮಲಗಿಸಿ ಬೆಂಕಿ ಇಡುತ್ತಿದ್ದರು. ಹೆಣ, ಕರ್ಪೂರ, ಹೂವು, ಗಂಧದಕಡ್ಡಿ, ಧೂಪ ಮುಂತಾದವುಗಳ ವಾಸನೆ ಸುಡುವ ಬೆಂಕಿಯಲ್ಲಿ ಒಂದು ರೀತಿಯ ಪವಿತ್ರ ಸ್ಪರ್ಶವನ್ನು ಅಲ್ಲಿನ ಪ್ರತಿಯೊಬ್ಬರಿಗೂ ದಯಪಾಲಿಸುತ್ತಿದೆಯೇನೋ ಅನ್ನಿಸಿತ್ತು. ಯಾರ ಮುಖದಲ್ಲೂ ದುಃಖವಿಲ್ಲ, ಯಾರ ಕಣ್ಣುಗಳಲ್ಲೂ ನೀರಿಲ್ಲ. ಬದಲಾಗಿ ನಗು, ತೃಪ್ತಿಯ ಭಾವಗಳು. ಅರೆಕ್ಷಣ ನನಗೆ ಸಾವಿನ ಬಗ್ಗೆ ಪ್ರೀತಿ ಹುಟ್ಟಿತು. ಗಂಗೆಯ ಮಡಿಲಲ್ಲೇ ಪ್ರಾಣ ಬಿಡಲೆಂದು ವಾರಣಾಸಿಗೆ ಬರುತ್ತಾರಂತೆ. ಅದಕ್ಕಾಗಿ ಅಲ್ಲಿ ಮುಕ್ತಿಧಾಮಗಳು ಇವೆಯಂತೆ. ಸುಮಾರು ಎರಡು ಗಂಟೆಗಳ ಕಾಲ ಮಣಿಕರ್ಣಿಕ ಘಾಟಿನ ಮೆಟ್ಟಿಲುಗಳ ಮೇಲೆ ಕುಳಿತವನಿಗೆ ಎರಡು ನಿಮಿಷಗಳಂತೆ ಸಮಯ ಸರಿದುಹೋಗಿತ್ತು. ನಾನೂ ಯಾಕೆ ಗಂಗೆಗೆ ಬಿದ್ದು ಪ್ರಾಣ ಕಳೆದುಕೊಳ್ಳಬಾರದೆನಿಸಿತ್ತು ಆ ಕ್ಷಣ'' ಎಂದು ಮಾತು ಮುಗಿಸಿದವನು ಊಟ ಮಾಡತೊಡಗಿದ. ''ನಾನೂ ಸದ್ಯದಲ್ಲೇ ಗಂಗೆ, ಮಣಿಕರ್ಣಿಕ ಘಾಟುಗಳನ್ನು ನೋಡಬೇಕೆಂಬ ಹಂಬಲದ ಬೀಜಗಳನ್ನು ನನ್ನೆದೆಯಲ್ಲಿ ಬಿತ್ತನೆ ಮಾಡಿದೆಯಲ್ಲ ಮಾರಾಯ'' ಎಂದು ಅವನೊಂದಿಗೆ ಊಟ ಮಾಡಿ ಹೊರಟಾಗ ಹತ್ತೂವರೆ ಗಂಟೆಯಾಗಿತ್ತು. ''ಬೆಳಗ್ಗೆ ತಿಂಡಿಗೆ ಮನೆಗೆ ಬಾ, ಕಾರು ಬರುತ್ತದೆ. ನಮ್ಮ ಮಲೆನಾಡಿನ ನೀರು ದೋಸೆ, ಕಡುಬು ಸವಿಯೋಣ. ಈ ಹತ್ತು ದಿವಸಗಳಿಂದ ಮನೆಯಲ್ಲಿ ತಿಂಡಿ, ಊಟ ಮಾಡಿದ್ದೇ ಇಲ್ಲ ನಾನು'' ಎಂದು ಎದ್ದು ನಿಂತೆ. ''ಓಹ್ ಫೈನ್, ಗುಡ್ ನೈಟ್. ಗಂಗೆಯಲ್ಲಿ ಮುಳುಗಿದ ನಂತರ ನನ್ನ ಪೈಲ್ಸ್ ಪ್ರಾಬ್ಲಂ ಕಡಿಮೆಯಾಗುತ್ತಿದೆ ಅನಿಸುತ್ತಿದೆ. ನೋಡೀಗ ಗಂಗೆಯನ್ನು ನೆನೆಸಿಕೊಂಡೆನಾ, ಇರಿಟೇಶನ್ ಕಂಪ್ಲೀಟ್ ಕಾಮ್ ಡೌನ್ ಆಗಿದೆ. ನಾನು ಇಲ್ಲಿಗೆ ಹೊರಟು ಬರುವಾಗ ಅಮ್ಮ ಹೇಳಿದ್ಲು ನಾನು ಮಗುವಾಗಿದ್ದಾಗ ನಮ್ಮಮ್ಮನ ಮೊಲೆಯಲ್ಲಿ ತೊಟ್ಟು ಹಾಲೂ ಬರುತ್ತಿರಲಿಲ್ಲವಂತೆ. ಹಾಗಾಗಿ, ಎರಡು ವರ್ಷಗಳ ಕಾಲ ನಾನು ನಿಮ್ಮಮ್ಮನ ಮೊಲೆ ಹಾಲು ಕುಡಿದೆನಂತೆ. ಆಗ ನಿನಗೂ ನಿಮ್ಮಮ್ಮ ಹಾಲು ಕುಡಿಸುತ್ತಿದ್ದಳಂತೆ. ಬಡವರ ಹೆಂಗಸರ ಮೊಲೆಗಳೆಂದೂ ಬತ್ತಿಹೋಗುವುದಿಲ್ಲವಂತೆ. ನೋಡು, ನಾನು ನೀನು ಒಂದೊಂದು ದಿಕ್ಕಿನಲ್ಲಿ ಹುಟ್ಟಿ ಬೆಳೆದವರು. ಆದರೆ, ಒಂದೇ ತಾಯಿ ಮೊಲೆಯ ಹಾಲನ್ನು ಕುಡಿದು ಬೆಳೆದಿದ್ದೀವಿ. ಸೋ ವಿ ಆರ್ ಬ್ರದರ್ಸ್. ಅದಕ್ಕಾಗಿಯೋ ಏನೋ ನಾನು ನಿನ್ನನ್ನು ಹುಡುಕಿಕೊಂಡು ಬಂದದ್ದು. ನನಗೆ ಹಾಲು ಕುಡಿಸಿದ್ದಕ್ಕಾಗಿ ನಮ್ಮ ತಾತ ಎಡ್ವರ್ಡ್ ನಿಮ್ಮಮ್ಮನಿಗೆ ಹಣ ಕೊಡಲು ಹೋದಾಗ ನಿಮ್ಮಮ್ಮ ನಿರಾಕರಿಸಿದ್ದಳಂತೆ. ಜೀವಪರತೆ ಅಂದರೆ ಅದೇ ಅಲ್ವಾ. ಗುಡ್ ನೈಟ್'' ಎಂದು ಉಲ್ಲಾಸಭರಿತನಾಗಿ ಹೇಳಿದ್ದ. ನಾನು ಕಾರು ಹತ್ತಿದ್ದೆ. ನಗರ ಪ್ರಶಾಂತವಾಗಿ ನಿದ್ದೆ ಮಾಡುತ್ತಿದೆಯೆನಿಸುತ್ತಿತ್ತು.

ಬೆಳಗ್ಗೆ ಒಂಬತ್ತು ಗಂಟೆಗೆ ಡಿಕ್ಯಾಸ್ಟ್ರೊನನ್ನು ಹೊತ್ತ ಕಾರು ನನ್ನ ಕ್ವಾರ್ಟರ್ಸ್ ಮುಂದೆ ನಿಂತಿತ್ತು. ಕಾರಿನಿಂದಿಳಿದ ಡಿಕ್ಯಾಸ್ಟ್ರೊ ಬಹಳ ಫ್ರೆಶ್ನೆಸ್ಸನ್ನು ತುಂಬಿಕೊಂಡವನಂತೆ ಕಾಣುತ್ತಿದ್ದ. ಅಸಿಸ್ಟೆಂಟ್ ಕಮಿಷನರ್ ಪೆದ್ದಚೆರುವು ಮೋಹನ ರಂಗಾರಾವ್‌ಗೆ ಫೋನ್ ಮಾಡಿ ಆಫೀಸಿಗೆ ಬರುವುದು ಒಂದು ಗಂಟೆ ತಡವಾಗುತ್ತದೆಂದು ಹೇಳಿದ್ದೆ. ''ಡೋಂಟ್ ವರಿ ಸರ್, ಟೇಕ್ ಯುವರ್ ಓನ್ ಟೈಮ್, ಸಿಟಿಯಲ್ಲಿ ಸಿಚುಯೇಷನ್ ತುಂಬಾ ನಾರ್ಮಲ್ ಆಗಿದೆ. ಬೆಳಗ್ಗೇನೆ ಸಿಟಿಯಲ್ಲಿ ನಾನೊಂದು ರೌಂಡ್ ಹೋಗಿ ಬಂದೆ'' ಎಂದಿದ್ದರು. ಮನೆಯಲ್ಲಿ ಕಾಲು ಇಡುತ್ತಿದ್ದಂತೆಯೇ, ''ಹೊಟ್ಟೆ ಹಸಿತಿದೆ, ಎಲ್ಲಪ್ಪ ಕಡುಬು, ನೀರು ದೋಸೆ. ಇತ್ತೀಚೆಗೆ ಹೊಟ್ಟೆ ಹಸಿದಿದ್ದೆ ಕಡಿಮೆ'' ಎಂದ ಡಿಕ್ಯಾಸ್ಟ್ರೊನನ್ನು ಸೀದಾ ಡೈನಿಂಗ್ ಟೇಬಲ್ಲಿಗೆ ಕರೆದೊಯ್ದಿದ್ದೆ. ನನ್ನ ಹೆಂಡತಿ ಬಿಸಿ ಬಿಸಿ ನೀರುದೋಸೆ, ಕಡುಬು, ಕಾಯಿಚಟ್ನಿ, ಚಿಕನ್ ಸಾರು ತಂದಿಟ್ಟಿದ್ದಳು. ಕಣ್ಣು ಕಿರಿದು ಮಾಡಿಕೊಂಡು ನನ್ನ ಹೆಂಡತಿಯ